# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 295 |
| ಸದಸ್ಯರ ಹೆಸರು : | ಶ್ರೀ ಮುನಿರಾಜು ಗೌಡ ಪಿ.ಎಂ(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ : | 20.09.2022 |
| ಉತ್ತರಿಸುವವರು : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ. |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಕಸಾಯಿಖಾನೆಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಅಧಿಕೃತ ಕಸಾಯಿಖಾನೆಗಳು ಮತ್ತು ಅನಧಿಕೃತ ಕಸಾಯಿಖಾನೆಗಳ ಸಂಖ್ಯೆ ಎಷ್ಟು? | ನಗರ ಸ್ಥಳೀಯ ಸಂಸ್ಥೆಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಅಧಿಕೃತ ಕಸಾಯಿಖಾನೆಗಳ ಸಂಖ್ಯೆ: ಕ್ರಮವಾಗಿ 18 ಮತ್ತು 2 ಒಟ್ಟು 20. |
| ಆ | ಕಸಾಯಿಖಾನೆಗಳನ್ನು ತೆರೆಯಲು / ನಿರ್ವಹಣೆಯ ಬಗ್ಗೆ ಇರುವ ಸರ್ಕಾರದ ಮಾರ್ಗಸೂಚಿಗಳೇನು? | • ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಸಾಯಿಖಾನೆಗಳ ಸ್ಥಾಪನೆಗೆ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ರ ಸೆಕ್ಷನ್ 365 ಹಾಗು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಸೆಕ್ಷನ್ 243, 244 & 245 ರೀತ್ಯಾ ಆಯಾಯ ನಗರಸ್ಥಳೀಯ ಸಂಸ್ಥೆಗಳು, ಪರವಾನಗಿ ಪ್ರಾಧಿಕಾರವಾಗಿರುತ್ತವೆ.<br>• ಜೊತೆಗೆ ಕಸಾಯಿಖಾನೆಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯಬೇಕಿರುತ್ತದೆ.<br>• Prevention of Cruelty to Animals (Slaughter House) Rules 2001 ರೀತ್ಯಾ ಕಸಾಖಾನೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶನಾಲಯದ ಪತ್ರದ ಸಂಖ್ಯೆ: ಪೌನಿ/82/ಘವನಿ/2013-14, ದಿನಾಂಕ: 27-03-2015 ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಪತ್ರ **ಅನುಬಂಧದಲ್ಲಿ** ಲಗತ್ತಿಸಿದೆ.<br>• ಅದರ ರೀತ್ಯಾ ನಗರ ವ್ಯಾಪ್ತಿಯಲ್ಲಿ ಪ್ರತಿ ದಿನ 10 ಅಥವಾ 10 ಕ್ಕಿಂತ ಹೆಚ್ಚಿನ ಪ್ರಾಣಿಗಳ ವಧೆ ನಡೆಯು ಸ್ಥಳವನ್ನು ಕಸಾಯಿಖಾನೆ ಎಂದು ಪರಿಗಣಿಸಲಾಗುವುದು.<br>• ಯಾವುದೇ ಕಾರಣಕ್ಕೂ ಗರ್ಭಧರಿಸುವ ಪ್ರಾಣಿಗಳು, 3 ತಿಂಗಳ ಕಡಿಮೆ ವಯಸ್ಸಿನ ಚಿಕ್ಕ ಮರಿಗಳನ್ನು ಹೊಂದಿರುವ ಪ್ರಾಣಿಗಳನ್ನು, 3 ತಿಂಗಳ ವಯಸ್ಸಿನ ಪ್ರಾಣಿಗಳನ್ನು ಮತ್ತು ಪಶು ವೈಧ್ಯಾಧಿಕಾರಿಗಳು ವಧೆಗೆ ಸೂಕ್ತವಲ್ಲವೆಂದು ಪ್ರಮಾಣೀಕರಿಸಿರುವ ಪ್ರಾಣಿಗಳನ್ನು ವಧೆ ಮಾಡಬಾರದು |

| | | |
|---|---|---|
| | | • ಕಸಾಯಿಖಾನೆಗಳ ಪ್ರಾಣಿ ಸ್ವೀಕೃತಿ ಪ್ರದೇಶಗಳಲ್ಲಿ (Reception area and resting ground) ಪ್ರಾಣಿಗಳ ಸುಗಮ ಸಂಚಾರಕ್ಕಾಗಿ ಸೂಕ್ತವಾದ ವ್ಯವಸ್ಥೆಯನ್ನು ಕಲ್ಪಿಸುವುದು, ತಪಾಸಣೆ (Liarages) ನಡೆಸಲು ವ್ಯವಸ್ಥೆ ಇರಬೇಕು.<br>• ಕಸಾಯಿಖಾನೆಗಳಲ್ಲಿ ವಧೆಗೆ ಮೊದಲು ಪ್ರಾಣಿಗಳನ್ನು ಮೂರ್ಛೆಗೊಳಿಸುವ ಸಲುವಾಗಿ Stunning area, ವಧೆಯ ನಂತರ ಅವಶ್ಯವಿರುವ Bleeding ಹಾಗೂ dressing ಗಾಗಿ ಪ್ರತ್ಯೇಕ ಸ್ಥಳಗಳನ್ನು ನಿಗಧಿಗೊಳಿಸಬೇಕು.<br>• ಕಸಾಯಿಖಾನೆಗಳಲ್ಲಿ ಅಗ್ಯವಿರುವ ನೀರಿನ ಸೌಲಭ್ಯ ಒದಗಿಸಬೇಕು. ಸಾಂಕ್ರಮಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಕಸಾಯಿಖಾನೆಗಳಲ್ಲಿ ಕೆಲಸಕ್ಕೆ ಬಳಸಬಾರದು.<br>• ಕಸಾಯಿಖಾನೆಗಳ ಸ್ಥಿತಿಗತಿಯನ್ನು ಪರಿಶೀಲಿಸಲು The Animal Welfare Board ರವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ವ್ಯಕ್ತಿಯು ಯಾವುದೇ ಕಸಾಯಿಖಾನೆಯನ್ನು ಮಾಲೀಕರ ಪೂರ್ವಾನುಮತಿ ಇಲ್ಲದೆ ತಪಾಸಣೆ ನಡೆಸಬಹುದು.<br>ಕಸಾಯಿಕಾನೆಗಳು Food & Safety Standards (Licensing & Registration of Food Business) Regulations, 2011 ರಂತೆ ಪರವಾನಗಿ ಪಡೆಯಬೇಕಿರುತ್ತದೆ. |
| ಇ | ಅನಧಿಕೃತ ಕಸಾಯಿಖಾನೆಗಳನ್ನು ಮುಚ್ಚಿಸಲು ಸರ್ಕಾರ ಕೈಗೊಂಡ ಕ್ರಮವೇನು | ರಾಜ್ಯದಲ್ಲಿ Prevention of Cruelty to Animals (Slaughter House) Rules 2001ರೀತ್ಯಾ ರಾಜ್ಯದ ಎಲ್ಲಾ ನಗರಸ್ಥಳೀಯ ಸಂಸ್ಥೆಗಳು ಅಗತ್ಯವಾದ ಮೂಲಭೂತ ಸೌಕರ್ಯ ಒಳಗೊಂಡ ವೈಜ್ಞಾನಿಕ ಕಸಾಯಿಖಾನೆ ನಿರ್ಮಿಸಿ, ಅಗತ್ಯವಾದ ಪರವಾನಗಿಗಳನ್ನು ಪಡೆದು, ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಚತೆ ಕಾಪಾಡಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಆಹಾರ ಲಭಿಸುವಂತೆ ಕ್ರಮವಹಿಸಲು ಹಾಗೂ ಅಕ್ರಮವಾಗಿ ನಡೆಸುತ್ತಿರುವ ಕಸಾಯಿಖಾನೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ತಪಾಸಣೆ ನಡೆಸಿ, ಅಂತಹ ಕಸಾಯಿಖಾನೆಗಳನ್ನು ತೆರವುಗೊಳಿಸಲು ತಿಳಿಸಲಾಗಿರುತ್ತದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಅನಧಿಕೃತ ಕಸಾಯಿಖಾನೆಗಳು ಇರುವ ಬಗ್ಗೆ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. |
| ಈ | ಕಸಾಯಿಖಾನೆಗಳ ತ್ಯಾಜ್ಯವನ್ನು ವಿಲೇ ಮಾಡುವ ವಿಧಾನ ಯಾವುದು? ಸದರಿ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ನಗರ ಸ್ಥಳೀಯ ಸಂಸ್ಥೆಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕಸಾಯಿಖಾನೆಗಳಲ್ಲಿ ಉತ್ಪತ್ತಿಯಾಗುವ ದ್ರವತ್ಯಾಜ್ಯವನ್ನು ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರೀತ್ಯಾ ಕಸಾಯಿಖಾನೆಗಳಲ್ಲಿ ಉತ್ಪಾದನೆಯಾಗುವ ಕೊಳೆಯು ಘನ ತ್ಯಾಜ್ಯವನ್ನು ಬಯೋಮಿಥನೇಷನ್, Rendering unit ಮೂಲಕ |

| | | |
|---|---|---|
| | | ವಿಲೇವಾರಿ ಮಾಡಬಹುದಾಗಿರುತ್ತದೆ. ದ್ರವ ತ್ಯಾಜ್ಯವನ್ನು ಪ್ರತ್ಯೇಕಿಸಿ Effluent Treatment Unit ಗಳಲ್ಲಿ ಸಂಸ್ಕರಿಸಿ ವಿಲೇವಾರಿ ಮಾಡಬೇಕಿರುತ್ತದೆ. ನಿಸತ್ವ ತ್ಯಾಜ್ಯ ವಸ್ತುಗಳನ್ನು ಸ್ಯಾನಿಟರಿ ನೆಲಭರ್ತಿ ಮಾಡಬಹುದಾಗಿರುತ್ತದೆ.<br><br>ನಿಯಮಗಳನುಸಾರ ಕಸಾಯಿಖಾನೆಗಳ ತ್ಯಾಜ್ಯವನ್ನು ವಿಲೇವಾರಿ ಮಾಡದಿದ್ದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ನೀಡುವ Consent for establishment and consent for Operation ನ್ನು ರದ್ದುಪಡಿಸಲಾಗುತ್ತದೆ.<br>ಕಸಾಯಿಖಾನೆ ಮತ್ತು ಮಾಂಸದ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸೂಕ್ತವಾಗಿ ವಿಲೇ ಮಾಡಲಾಗುತ್ತಿದ್ದು, ಕೆರೆ ಮತ್ತು ಬಯಲು ಪ್ರದೇಶಗಳಲ್ಲಿ ಯಾವುದೇ ಮಾಲಿನ್ಯ ಉಂಟಾಗದಂತೆ ಆಗಿಂದಾಗ್ಗೆ ಕ್ರಮವಹಿಸಲಾಗುತ್ತಿರುತ್ತದೆ. |
| ಉ | ಕಸಾಯಿಖಾನೆ ಮತ್ತು ಮಾಂಸದ ಅಂಗಡಿಗಳ ತ್ಯಾಜ್ಯವನ್ನು ಸೂಕ್ತವಾಗಿ ವಿಲೇ ಮಾಡದೆ ಕೆರೆ ಮತ್ತು ಬಯಲು ಪ್ರದೇಶದಲ್ಲಿ ವಿಲೇ ಮಾಡಿ ಮಾಲಿನ್ಯ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ರೀತಿ ತ್ಯಾಜ್ಯವನ್ನು ವಿಲೇ ಮಾಡುವವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು? | ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು 2016 ರೀತ್ಯಾ ತ್ಯಾಜ್ಯ ಉತ್ಪಾದಕರು ಮೂಲದಲ್ಲಿ ತ್ಯಾಜ್ಯ ವಸ್ತುಗಳನ್ನು ಬೇರ್ಪಡಿಸಿ ನಗರಸ್ಥಳೀಯ ಸಂಸ್ಥೆಗಳು ನಿಗಧಿಪಡಿಸಿರುವ ವಾಹನಗಳಿಗೆ ನೀಡಬೇಕಿರುತ್ತದೆ. ಎಲ್ಲೆಂದರಲ್ಲಿ ತ್ಯಾಜ್ಯ ವಿಲೇವಾರಿ ಮಾಡುವುದನ್ನು ನಿಷೇಧಿಸಿದೆ ಹಾಗು ಕರ್ನಾಟಕ ಪೌರಸಭೆಗಳ ಘನತ್ಯಾಜ್ಯ ವಸ್ತು ನಿರ್ವಹಣೆ ಮಾದರಿ ಉಪವಿಧಿಗಳು. 2019 ರ ರೀತ್ಯಾ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ದಂಡ ಜುಲ್ಮಾನೆ ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಊ | ಕಸಾಯಿಖಾನೆ ಮತ್ತು ಮಾಂಸದ ಅಂಗಡಿಗಳ ತ್ಯಾಜ್ಯವನ್ನು ತಿನ್ನುವ ನಾಯಿಗಳು ಹಸಿ ಮಾಂಸ ತಿನ್ನಲು ಪಳಗಿ. ಮಾಂಸ ಸಿಗದೇ ಇದ್ದಾಗ, ಅಸಹಾಯಕ ಮಕ್ಕಳ ಮೇಲೆ ದಾಳಿ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಮೇಲ್ಕಂಡಂತೆ ತ್ಯಾಜ್ಯ ವಿಲೇವಾರಿ ಮಾಡುತ್ತಿರುವುದರಿಂದ ನಾಯಿಗಳು ಹಸಿಮಾಂಸ ತಿನ್ನಲು ಸಿಗದೇ ಇದ್ದಾಗ ಅಸಹಾಯಕ ಮಕ್ಕಳ ಮೇಲೆ ದಾಳಿ ಮಾಡಿರುವ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಋ | ಬಂದಿದ್ದಲ್ಲಿ, ಪಶುಪಾಲನಾ ಇಲಾಖೆ ಸ್ಥಳೀಯ ಆಡಳಿತ ಕಸಾಯಿಖಾನೆಗಳನ್ನು ಪರಿಶೀಲನೆ ನಡೆಸಿ ಸಮರ್ಪಕ ತ್ಯಾಜ್ಯ ವಿಲೇವಾರಿ ಮತ್ತು ಶುಚಿತ್ವ ನಿರ್ವಹಿಸದ ಕಸಾಯಿಖಾನೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸುವುದೇ? | ಅನ್ವಯಿಸುವುದಿಲ್ಲ. |

ಸಂಖ್ಯೆ: ನಅಇ 215 ಜಿಇಎಲ್ 2022(ಇ)

ಎನ್.ನಾಗರಾಜ್ (ಎಂ.ಟಿ.ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080– 22867172 / 22866302
ಫ್ಯಾಕ್ಸ್: 080–22863576 / 22861665
Email: dmablr@gmail.com
Website:www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: ಪೌನಿ/82/ಘವನಿ/2013–14

ದಿನಾಂಕ: 27-03–2015

ಗೆ,

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
2. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಜಿಲ್ಲಾ ಯೋಜನಾ ನಿರ್ದೇಶಕರುಗಳ ಮೂಲಕ

ಮಾನ್ಯರೇ,

ವಿಷಯ : ಕಸಾಯಿಖಾನೆ ನಿರ್ಮಾಣ ಹಾಗು ನಿರ್ವಹಣೆ ವೇಳೆಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು

ಉಲ್ಲೇಖ : 1) ಈ ಕಛೇರಿಯ ಸುತ್ತೋಲೆ ಸಂಖ್ಯೆ ಪೌನಿ/ನಿನ/ಕಸಾಯಿಖಾನೆ/ಸಿ ಆರ್ 06/05–06, ದಿನಾಂಕ 28-2-2013

2) ಈ ಕಛೇರಿಯ ಪತ್ರದ ಸಂಖ್ಯೆ 23-8-2013

3) Food saftey & Standards (Food Products Standards and Food Activités) Regulations, 2011

4) Indian Standards No. IS 14904 :2007

5) Prevention of Cruelty to Animals (Slaughter House) Rules, 2001

*****

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ Prevention of Cruelty to Animals (Slaughter House) Rules, 2001 ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಕಡ್ಡಾಯ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಈಗಾಗಲೇ ಅಗತ್ಯ ನಿರ್ದೇಶನಗಳನ್ನು ಉಲ್ಲೇಖ (1) ಮತ್ತು (2) ರ ಪತ್ರಗಳಲ್ಲಿ ನೀಡಲಾಗಿದ್ದು, ಇದರ ಕುರಿತಾಗಿ ಮತ್ತೊಮ್ಮೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ದಿನಾಂಕ 16–3–2015 ರ ರಾಜ್ಯ ಮಟ್ಟದ ಕಸಾಯಿಖಾನೆಗಳ ನಿರ್ವಹಣಾ ಸಮಿತಿ ಸಭೆಯಲ್ಲಿ ಸೂಚಿಸಿರುವ ಮೇರೆಗೆ ಮತ್ತೊಮ್ಮೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. ಪ್ರತಿ ದಿನ 10 ಅಥವಾ 10ಕ್ಕಿಂತ ಹೆಚ್ಚಿನ ಸಂಖ್ಯೆಯ ಪ್ರಾಣಿಗಳ ವಧೆ ನಡೆಯುವ ಸ್ಥಳವನ್ನು ಕಸಾಯಿಖಾನೆ ಎಂದು ಕರೆಯಲಾಗುವುದು, ಅಂತಹ ಕಸಾಯಿಖಾನೆಗಳು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅಧಿಕೃತ ಪರವಾನಿಗೆ ಪಡೆದು ನಿರ್ವಹಿಸಬೇಕಿರುತ್ತದೆ (source : section 365 of THE KARNATAKA MUNICIPAL CORPORATIONS ACT, 1976 & 243,244 & 245 of THE KARNATAKA MUNICIPALITIES ACT, 1964)
2. ಯಾವುದೇ ವ್ಯಕ್ತಿ, ಯಾವುದೇ ಕಾರಣಕ್ಕೂ ಪುರಸಭಾ ವ್ಯಾಪ್ತಿಯಲ್ಲಿನ ನಿಗಧಿತ ಅಧಿಕೃತ ಪರವಾನಿಗೆ ಪಡೆದಿರುವ ಕಸಾಯಿಖಾನೆಗಳನ್ನು ಹೊರತು ಪಡಿಸಿ ಬೇರೆ ಸ್ಥಳಗಳಲ್ಲಿ ವಧೆ ಮಾಡುವಂತಿಲ್ಲ.
3. ಯಾವುದೇ ಕಾರಣಕ್ಕೂ, ಗರ್ಭಧರಿಸಿರುವ ಪ್ರಾಣಿಗಳನ್ನು , 3 ತಿಂಗಳಿಗಿಂತ ಕಡಿಮೆ ವಯಸ್ಸಿನ ಚಿಕ್ಕ ಮರಿಗಳನ್ನು ಹೊಂದಿರುವ ಪ್ರಾಣಿಗಳನ್ನು , 3 ತಿಂಗಳ ವಯಸ್ಸಿನ ಪ್ರಾಣಿಗಳನ್ನು ಮತ್ತು ಪಶು ವೈದ್ಯಾಧಿಕಾರಿಗಳು ವಧೆಗೆ ಸೂಕ್ತವಿರುವುದಿಲ್ಲವೆಂದು ಪ್ರಮಾಣೀಕರಿಸಿರುವ ಪ್ರಾಣಿಗಳನ್ನು ವಧೆ ಮಾಡಬಾರದು.

4. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ಥಳೀಯ ಸಂಸ್ಥೆಯಲ್ಲಿನ ಮಾಂಸದ ಮೇಲೆ ಅವಲಂಬಿತರಾಗಿರುವ ಜನಸಂಖ್ಯೆಯನ್ನಾಧರಿಸಿ ಕಸಾಯಿಖಾನೆಯ ಸಾಮರ್ಥ್ಯವನ್ನು ನಿಗಧಿಗೊಳಿಸಬೇಕು.

5. ಕಸಾಯಿಖಾನೆಗಳಿಗೆ ಸಾಗಿಸಲಾಗುವ ಪ್ರಾಣಿಗಳಿಗೆ ಸಂಬಂಧಿಸಿದಂತೆ ಇರುವ code of practice for transportation of live stock as per Indian Standards – 14904 :2007 ರ ಹಾಗು Transport of Animals Rules 1978, & Transport of Animals (Amendement) Rules 2001 ಹಾಗು ಇನ್ನಿತರೆ ಅನ್ವಯಿಸುವ ಕಾನೂನು ಹಾಗು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

6. ಕಸಾಯಿಖಾನೆಗಳಲ್ಲಿ ಪ್ರಾಣಿಗಳು ಪಶು ತಪಾಸಣೆ ನಡೆಸಲು ಅಗತ್ಯವಿರುವಷ್ಟು ಸ್ವಾಗತ ಪ್ರದೇಶವಿರಬೇಕು, ಪಶು ವೈದ್ಯಾಧಿಕಾರಿಗಳು ಪ್ರತಿ ಗಂಟೆಗೆ ಗರಿಷ್ಟ 12 ಪ್ರಾಣಿಗಳಂತೆ, ದಿನ ಒಂದಕ್ಕೆ 96 ಸಂಖ್ಯೆ ಮೀರದಂತೆ ಪ್ರಾಣಿಗಳನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು. ಕೇಂದ್ರ ಸರ್ಕಾರವು ನಿಗಧಿಗೊಳಿಸಿರುವ ಮಾದರಿಯಲ್ಲಿ ಫಿಟ್ನೆಸ್ ಸರ್ಟಿಫಿಕೇಟ್ ನ್ನು ನೀಡಬೇಕು. ಪ್ರಾಣಿಗಳ ಸ್ವೀಕೃತಿ ಪ್ರದೇಶಗಳಲ್ಲಿ ಪ್ರಾಣಿಗಳನ್ನು ವಾಹನಗಳಿಂದ ಇಳಿಸಲು ಹಾಗು ಪ್ರಾಣಿಗಳಿಗೆ ನೀರು ಮತ್ತು ಮೇವಿನ ವ್ಯವಸ್ಥೆ ಒದಗಿಸಬೇಕು.

7. ವಧೆಗೊಳ್ಳಲ್ಪಡುವ ಪ್ರಾಣಿಗಳ ವರ್ಗಗಳ ಆಧಾರದ ಮೇಲೆ, ಅವಶ್ಯ ಕೊಠಡಿಗಳನ್ನು ಸ್ಥಾಪಿಸಬೇಕು ಹಾಗು ಸದರ ಕೊಠಡಿಗಳಲ್ಲಿ ನೀರು ಮತ್ತು ಮೇವಿನ ವ್ಯವಸ್ಥೆ ಒದಗಿಸಬೇಕು.

8. ಅಂಟುವ್ಯಾಧಿ ಉಳ್ಳ, ಸಾಂಕ್ರಾಮಿಕ ರೋಗಗಳುಳ್ಳ ಮತ್ತು ಅಂಕೆಯಲ್ಲಿದ ಪ್ರಾಣಿಗಳೆಂದು ಸಂದೇಹಿಸಲ್ಪಟ್ಟ ಪ್ರಾಣಿಗಳನ್ನು ಇತರೆ ಪ್ರಾಣಿಗಳಿಂದ ಪ್ರತ್ಯೇಕಿಸುವ ಸಲುವಾಗಿ ಪ್ರತ್ಯೇಕ ಆವರಣಗಳಲ್ಲಿ ಕೂಡಿಡಲು ಹಾಗು ಸದರಿ ಪ್ರಾಣಿಗಳಿಗೆ ನೀರು ಮತ್ತು ಮೇವಿನ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

9. ಕಸಾಯಿಖಾನೆಗಳಲ್ಲಿ ಪ್ರಾಣಿಗಳ ವಿಶ್ರಾಂತಿ ಜಾಗಗಳಿಗೆ ಅಗತ್ಯ ಮೇಲ್ಛಾವಣಿಯನ್ನು ಒದಗಿಸಬೇಕು.

10. ಪ್ರಾಣಿಗಳ ಗೊರಸುಗಳಿಂದ ನೆಲಕ್ಕೆ ಉಂಟಾಗಬಹುದಾದಂತಹ ನಷ್ಟವನ್ನು ತಪ್ಪಿಸುವ ಸಲುವಾಗಿ Ante-mortem ಹಾಗು ಪೆನ್‌ಗಳ ನೆಲಕ್ಕೆ ಕಾಂಕ್ರೀಟ್ ಅಥವಾ ಜಾರದಿರುವ ಮೇಲ್ಮೈಯುಳ್ಳ (ಹೇರಿಂಗ್ ಬೋನ್ ರೀತಿಯ) ಹಾಸನ್ನು ಸೂಕ್ತ ಒಳಚರಂಡಿ ಸಂಪರ್ಕದೊಂದಿಗೆ ಅಭಿವೃದ್ಧಿಪಡಿಸಬೇಕು ಹಾಗು ಪ್ರವೇಶದ್ವಾರ ಹೊರತುಪಡಿಸಿ ಜಾನುವಾರುಗಳ ಪೆನ್‌ಗಳ ನೆಲಕ್ಕೆ 150 ರಿಂದ 300 ಮಿಮಿ ಎತ್ತರದ ದಿಂಡುಗಳನ್ನು ನಿರ್ಮಿಸಬೇಕು ಹಾಗು ಅಂತಹ ಪೆನ್ ಗಳಿಗೆ ಮೇಲ್ಛಾವಣಿ ಇರಬೇಕು.

11. ಪಶು ತಪಾಸಣೆ ಆದ ನಂತರ ಪ್ರತಿ ಪ್ರಾಣಿಯು ವಧೆಗೆ ಮುನ್ನ ತಂಗುದೊಡ್ಡಿ (Lairages) ಗಳಲ್ಲಿ 24 ಗಂಟೆಗಳ ಕಾಲ ವಿಶ್ರಾಂತಿ ಪಡೆಯಬೇಕು, ತಂಗುದೊಡ್ಡಿಯು ಸಾಕಷ್ಟು ದೊಡ್ಡದಿರಬೇಕು, ತಂಗುದೊಡ್ಡಿಯ ಸ್ಥಳವನ್ನು ನಿರ್ಧರಿಸುವಾಗ Prevention of Cruelty to Animals (Slaughter House) Rules, 2001 ರಲ್ಲಿ ದೊಡ್ಡ ಮತ್ತು ಚಿಕ್ಕ ಪ್ರಾಣಿಗಳಿಗೆ ನಿಗಧಿಗೊಳಿಸಿರುವ ಸ್ಥಳವನ್ನು ಆಧರಿಸಿರಬೇಕು ಹಾಗು ನಿಯಮಾವಳಿಗಳಲ್ಲಿ ತಂಗುದೊಡ್ಡಿಗೆ ಸಂಬಂಧಿಸಿದಂತೆ ಇರುವ ಎಲ್ಲಾ ಮಾನದಂಡಗಳ ಅನುಸಾರ ಇರಬೇಕು.

12. ಕಸಾಯಿಖಾನೆಗಳಲ್ಲಿ ಒಂದು ಪ್ರಾಣಿಯ ಸಮ್ಮುಖದಲ್ಲಿ ಮತ್ತೊಂದು ಪ್ರಾಣಿಯನ್ನು ವಧೆ ಮಾಡಬಾರದು, ಪ್ರಾಣಿಗಳಿಗೆ ಯಾವುದೇ ನಿರ್ದಿಷ್ಟ ಖಾಯಿಲೆ ಅಥವಾ ಬೇನೆಯನ್ನು ಗುಣಪಡಿಸುವುದಕ್ಕೆ ಹೊರತುಪಡಿಸಿ ಇನ್ನಿತರೆಯಾಗಿ ರಾಸಾಯನಿಕ ಅಥವಾ ಇನ್ನಿತರೆ ಪದಾರ್ಥಗಳನ್ನು ನೀಡುವಂತಿಲ್ಲ.

13. ಕಸಾಯಿಖಾನೆಗಳಲ್ಲಿ ವಧೆಗೆ ಮೊದಲು ಪ್ರಾಣಿಗಳನ್ನು ಮೂರ್ಛೆಗೊಳಿಸುವ ಸಲುವಾಗಿ stunning area, ವಧೆಯ ನಂತರ ಅವಶ್ಯವಿರುವ ಬ್ಲೀಡಿಂಗ್ ಹಾಗು ಡ್ರೆಸ್ಸಿಂಗ್‌ಗಾಗಿ ಪ್ರತ್ಯೇಕ ಸ್ಥಳಗಳನ್ನು ನಿಗಧಿಗೊಳಿಸಬೇಕು. ನಿಯಮಾವಳಿಗಳಲ್ಲಿ ಇವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ರೂಪಿಸಿರುವ ಸೂಚನೆಗಳನ್ನು ಪಾಲಿಸಬೇಕು.

14. ಕಸಾಯಿಖಾನೆಗಳಲ್ಲಿ ಮಧ್ಯಂತರವಾಗಿ ಹಾಗು ದೈನಂದಿನ ಚಟುವಟಿಕೆಗಳ ನಂತರ ನೆಲ ಹಾಗು ಗೋಡೆಗಳನ್ನು ತೊಳೆಯಲು ಅಗತ್ಯ ನೀರಿನ ಸೌಲಭ್ಯ ಒದಗಿಸಬೇಕು ಹಾಗು ಪ್ರಾಣಿಗಳ ವಧೆ ಮಾಡುವವರಿಗೆ ಕೈ –ಕಾಲುಗಳನ್ನು ಸ್ವಚ್ಛಗೊಳಿಸಲು ವಾಷ್ ಬೇಸಿನ್ , ನೈಫ್ ಸ್ಯಾನಿಟೈಸರ್‌ಗಳನ್ನು ಒದಗಿಸಬೇಕು.

15. ಕಸಾಯಿಖಾನೆಗಳಲ್ಲಿ 18 ವರ್ಷಗಳಿಗಂತ ಮೇಲ್ಪಟ್ಟ ವ್ಯಕ್ತಿಗಳನ್ನು ಮಾತ್ರ ಕೆಲಸಕ್ಕೆ ನೇಮಿಸಿಕೊಳ್ಳಬೇಕು

16. ಅಂಟು ಜಾಡ್ಯ ಅಥವಾ ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಕಸಾಯಿಖಾನೆಗಳಲ್ಲಿ ಕೆಲಸಕ್ಕೆ ಬಳಸಬಾರದು.

17. ಕಸಾಯಿಖಾನೆಗಳಲ್ಲಿನ ಸ್ಥಿತಿ ಗತಿಯನ್ನು ಪರಿಶೀಲಿಸಲು ಭಾರತ ಸರ್ಕಾರದ ದಿ ಅನಿಮಲ್ ವೆಲ್ಪೇರ್ ಬೋರ್ಡ್ ಅಥವಾ ಪ್ರಾಣಿ ದಯಾ ಸಂಘದವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ವ್ಯಕ್ತಿಯು ಯಾವುದೇ ಕಸಾಯಿಖಾನೆಯನ್ನು ಮಾಲಿಕರ ಅಥವಾ ಕಸಾಯಿಖಾನೆ ಉಸ್ತುವಾರಿವಹಿಸಿರುವ ವ್ಯಕ್ತಿಯ ಪೂರ್ವಾನುಮತಿ ಇಲ್ಲದೇ ಇದ್ದರೂ ಸಹಿತ ಕಸಾಯಿಖಾನೆಗಳನ್ನು ಕಛೇರಿ ಅವಧಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ. ಪರಿಶೀಲನಾವರದಿಯನ್ನು ದಿ ಅನಿಮಲ್ ವೆಲ್ಪೇರ್ ಬೋರ್ಡ್ ಹಾಗು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಸಲ್ಲಿಸಿ, ಶಿಸ್ತು ಕ್ರಮವನ್ನು ಶಿಫಾರಸ್ಸು ಮಾಡಬಹುದು.
18. ಇದನ್ನು ಹೊರತುಪಡಿಸಿ, Prevention of Cruelty to Animals (Slaughter House) Rules, 2001 ರಲ್ಲಿನ ಮಾರ್ಗಸೂಚಿಗಳಲ್ಲಿ ಕಸಾಯಿಖಾನೆಗಳ ವಿನ್ಯಾಸ, ನಿರ್ವಹಣೆ ಮತ್ತು ದೈನಂದಿನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ನೀಡಿರುವ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸಲು ಕ್ರಮ ಕೈಗೊಳ್ಳಬೇಕಿರುತ್ತದೆ.
19. ಕಸಾಯಿಖಾನೆಗಳು Food & Saftey standards (licensing and Registration of Food Business) Regulations, 2011 ರಂತೆ ಪರವಾನಿಗೆ ಪಡೆಯಬೇಕು.
20. ಕಸಾಯಿಖಾನೆ ನಿರ್ಮಾಣಕ್ಕಾ ಸೂಕ್ತ ಜಾಗವನ್ನು ಗುರುತಿಸಿದ ನಂತರ, ಸದರಿ ಜಾಗದಲ್ಲಿ ಕಸಾಯಿಖಾನೆ ನಿರ್ಮಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗು ಇತರೆ ಶಾಸನಬದ್ಧ ಅನುಮೋದನೆಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಹಾಗು ಕಸಾಯಿಖಾನೆಯನ್ನು ಉದ್ದಿಮೆ ಎಂದು ಪರಿಗಣಿಸಿ ಭೂ ಬಳಕೆ ಮಾದರಿ (Land use pattern) ಯನ್ನು ಬದಲಾಯಿಸಿ ನೀಡುವಂತೆ District Town Planning ನ್ನು ಕೋರಿ ಪಡೆಯಬೇಕಿರುತ್ತದೆ.
21. ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ನಗರಸ್ಥಳೀಯ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಕಸಾಯಿಖಾನೆಗಳನ್ನು ಗುರುತಿಸಿ ಪಟ್ಟಿ ಮಾಡಿ ಸದರಿ ಮಾಹಿತಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
22. ಹಳೆಯ ಕಸಾಯಿಖಾನೆಗಳ ಆಧುನೀಕರಣ ಅಥವಾ ಹಳೆಯ ಕಸಾಯಿಖಾನೆಗಳು ಸಾರ್ವಜನಿಕ ವಾಸಸ್ಥಳಕ್ಕೆ ಹತ್ತಿರವಿದ್ದಲ್ಲಿ, ಅವುಗಳನ್ನು ಸ್ಥಳಾಂತರಗೊಳಿಸಲು ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು (ಆಧುನಿಕ ಕಸಾಯಿಖಾನೆ ನಿರ್ಮಾಣಕ್ಕೆ ಸ್ಥಳವನ್ನು ಆಯ್ಕೆ ಮಾಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ).
23. ಕಸಾಯಿಖಾನೆಗಳ ಕಾರ್ಯವೈಖರಿಯನ್ನು ಪರಿಶೀಲಿಸಲು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಕಸಾಯಿಖಾನೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ನಿಯಮಗಳ ಅನುಷ್ಠಾನಕ್ಕೆ ಬೇಕಿರುವ ಅಗತ್ಯ ನಿರ್ದೇಶನಗಳನ್ನು ನೀಡಬೇಕು.
24. ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ನಗರಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿರುತ್ತಿರುವ ಅನಧಿಕೃತ ಕಸಾಯಿಖಾನೆಗಳು, ಕಾನೂನಿಗೆ ವಿರುದ್ಧವಾಗಿ ಪ್ರಾಣಿಗಳ ವಧೆ ಮಾಡಲಾಗುತ್ತಿರುವ ಸ್ಥಳಗಳು, ಎಷ್ಟೇ ಚಿಕ್ಕ ಪ್ರಮಾಣದಾಗಿದ್ದರೂ ಅವುಗಳ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಬೇಕು.
25. ಕಸಾಯಿಖಾನೆಗಳಲ್ಲಿನ ವಧಾಗಾರರಿಗೆ (butchers) ಅಗತ್ಯ ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕು.

ತಮ್ಮ ವಿಶ್ವಾಸಿ

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ

ಪ್ರತಿಯನ್ನು ;

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ರವರ ಮಾಹಿತಿಗಾಗಿ
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ರವರ ಮಾಹಿತಿಗಾಗಿ

5

ಕರ್ನಾಟಕ ಸರ್ಕಾರ

ಸಂಖ್ಯೆ:ಪೌನಿ:ನಿನ:ಕಸಾಯಿಖಾನೆ:ಸಿ.ಆರ್ 06:/05-06 ದಿನಾಂಕ: 28-02-2013
(Part file-3, Vol.-III)

## ಸುತ್ತೋಲೆ

ವಿಷಯ: ರಾಜ್ಯದ ಸ್ಥಳೀಯ ಸಂಸ್ಥೆಗಳ ಕಸಾಯಿಖಾನೆಗಳ ಕಾರ್ಯವೈಖರಿ ಮತ್ತು ಕಸಾಯಿಖಾನೆಗಳಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ.

ಉಲ್ಲೇಖ: 1) ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಪತ್ರ ಸಂಖ್ಯೆ/KSPCB/CEO-2/EO/MSW/slaughterhouse guidelines/2012-13, ದಿನಾಂಕ 22-02-2013

2) ಪೌರಾಡಳಿತ ಹಾಗು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತಕಾರ್ಯದರ್ಶಿಗಳು ರವರ ಪತ್ರ ಸಂಖ್ಯೆ/ಪೌಸಾಉಸ/ಆ ಕಾ/1326/2013, ದಿನಾಂಕ 05-02-2013

3) ಮಾನ್ಯ ಜೀವಿಶಾಸ್ತ್ರ, ಪರಿಸರ, ಯೋಜನೆ ಮತ್ತು ಸಾಂಖ್ಯಿಕ ಸಚಿವರ ಟಿಪ್ಪಣಿ ಸಂಖ್ಯೆ: MEEPS/1579/12-13, ದಿನಾಂಕ 23-01-2013

****

ರಾಜ್ಯದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಸಾಯಿಖಾನೆಗಳ ಕಾರ್ಯವೈಖರಿ ಮತ್ತು ಕಸಾಯಿಖಾನೆಗಳಲ್ಲಿ ತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯದೇ ಇರುವ ಬಗ್ಗೆ ಘನ ನ್ಯಾಯಾಲಯಗಳು ಹಾಗು Animal Welfare Board of India ಅಸಮಾಧಾನವನ್ನು ವ್ಯಕ್ತ ಪಡಿಸಿರುತ್ತವೆ. ಕಸಾಯಿಖಾನೆಗಳಲ್ಲಿ ಪ್ರಾಣಿಗಳ ವಧೆಯನ್ನು ಹಿಂಸೆ ಮುಕ್ತವಾಗಿಸಲು ಕೇಂದ್ರ ಸರ್ಕಾರವು Prevention of cruelty to animals (Slaughter House) Rules, 2001, ನಿಯಮಗಳನ್ನು ಜಾರಿಗೊಳಿಸಿದೆ. ಕಸಾಯಿಖಾನೆಗಳ ನಿರ್ವಹಣೆ ಹಾಗು ಆಧುನಿಕ ಕಸಾಯಿಖಾನೆ ನಿರ್ಮಾಣಕ್ಕೆ ಬೇಕಾದ ಜಾಗವನ್ನು ಆಯ್ಕೆ ಮಾಡಬೇಕಾದ ಸಂದರ್ಭಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳ ಕುರಿತಾಗಿ ಉಲ್ಲೇಖ (1) ಮತ್ತು (3) ಪತ್ರಗಳಲ್ಲಿ ತಿಳಿಸಲಾಗಿರುತದೆ. ಸದರಿ ಮಾರ್ಗಸೂಚಿಗಳನ್ವಯ ಕೆಳಗಿನ ಮಾರ್ಗಸೂಚಿಗಳನ್ನುಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ.

**ಕಸಾಯಿಖಾನೆಗಳ ದೈನಂದಿನ ಕಾರ್ಯನಿರ್ವಹಣೆ**

- ಕಸಾಯಿಖಾನೆಗಳನ್ನು ಆಹಾರ ಉದ್ಯಮದ ಅಂಗವೆಂದು ಪರಿಗಣಿಸಿ, ಕಸಾಯಿಖಾನೆಯ ಹೊರಗಡೆ ಪ್ರಾಣಿಗಳ ವಧೆಯನ್ನು ನಿಷೇದಿಸಬೇಕು
- 3 ತಿಂಗಳಿಗಿಂತ ಕಡಿಮೆ ವಯಸ್ಸಿನ ಪ್ರಾಣಿಗಳು ಮತ್ತು ಗರ್ಭ ಧರಿಸಿರುವ ಪ್ರಾಣಿಗಳನ್ನು ವಧೆಗೊಳಿಸಬಾರದು.
- ಪಶುವೈದ್ಯಾಧಿಕಾರಿಗಳು ಪ್ರತಿಗಂಟೆಗೆ 12 ಪ್ರಾಣಿಗಳನ್ನು ಮೀರದಂತೆ ಮತ್ತು ಪ್ರತಿ ದಿನ 96 ಪ್ರಾಣಿಗಳನ್ನು ಮೀರದಂತೆ ಪರಿಶೀಲಿಸಿ ಪ್ರಮಾಣೀಕರಿಸಬೇಕು.
- ಕಸಾಯಿಖಾನೆಗಳ ಪ್ರಾಣಿ ಸ್ವೀಕೃತಿ ಪ್ರದೇಶಗಳಲ್ಲಿ (Reception area or resting grounds) ಪ್ರಾಣಿಗಳ ಸುಗಮ ಸಂಚಾರಕ್ಕಾಗಿ ಸೂಕ್ತವಾದ ವ್ಯವಸ್ಥೆಗಳನ್ನು ಕಲ್ಪಿಸುವುದು.

PDF processed with CutePDF evaluation edition www.CutePDF.com

- ಕಸಾಯಿಖಾನೆಗಳಲ್ಲಿ ಪ್ರಾಣಿಗಳ ವರ್ಗದ ಆಧಾರದ ಮೇಲೆ ಸೂಕ್ತವಾದ ತಂಗುದಾಣಗಳನ್ನು ಹಾಗೂ ಪ್ರಾಣಿಗಳಿಗೆ ಸೂಕ್ತವಾದ ಮೇವು ಮತ್ತು ನೀರಿನ ವ್ಯವಸ್ಥೆಗಳನ್ನು ಕಲ್ಪಿಸುವುದು.
- ಕಸಾಯಿಖಾನೆಗಳ ಪ್ರಾಣಿಗಳ ವಿಶ್ರಾಂತಿ ಜಾಗಕ್ಕೆ ತಾರಸು/ಛಾವಣಿಯನ್ನು ಅಳವಡಿಸುವುದು.
- ಕಸಾಯಿಖಾನೆಗಳಲ್ಲಿ ಪ್ರಾಣಿಗಳಿಗೆ ಬಿಸಿಲು, ಚಳಿ, ಗಾಳಿಯಿಂದ ರಕ್ಷಿಸಲು ಮತ್ತು ವಿಶ್ರಾಂತಿಗಾಗಿ ಸೂಕ್ತವಾದ ತಂಗುದೊಡ್ಡಿಗಳನ್ನು ನಿರ್ಮಿಸುವುದು ಸೂಕ್ತವಿರುತ್ತದೆ.
- ಕಸಾಯಿಖಾನೆಗಳಲ್ಲಿ ಒಂದು ಪ್ರಾಣಿಯ ಸಮ್ಮುಖದಲ್ಲಿ ಮತ್ತೊಂದು ಪ್ರಾಣಿಯನ್ನು ವಧೆಗೊಳಿಸ ಬಾರದು
- ಕಸಾಯಿಖಾನೆಗಳಿಗೆ ದೊಡ್ಡ ಪ್ರಾಣಿಗಳಿಗೆ 2.8 ಚ.ಮೀ., ಮತ್ತು ಸಣ್ಣ ಪ್ರಾಣಿಗಳಿಗೆ 1.6 ಚ.ಮೀ., ಜಾಗವನ್ನು ಕಲ್ಪಿಸುವುದು:
- ಕಸಾಯಿಖಾನೆಗಳಲ್ಲಿ ಪ್ರಾಣಿಗಳ ವಧೆಯನ್ನು ರಾಸಾಯನಿಕ ಅಥವಾ ಇನ್ನಿತರೆ ಪದಾರ್ಥಗಳ ಮುಖಾಂತರ ನಿಷೇಧಿಸುವುದು:
- ಕಸಾಯಿಖಾನೆಗಳಲ್ಲಿ ರಕ್ತದ ಶೇಖರಣೆಗಾಗಿ ಸೂಕ್ತವಾದ ವ್ಯವಸ್ಥೆಗಳನ್ನು ಕಲ್ಪಿಸುವುದು:
- ಕಸಾಯಿಖಾನೆಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ ಸಮ್ಮತಿ ಪತ್ರ ಪಡೆದ 18 ವರ್ಷ ಮೇಲ್ಪಟ್ಟ ವ್ಯಕ್ತಿಗಳನ್ನು ಮಾತ್ರ ಪ್ರಾಣಿ ವಧೆಗಾಗಿ ನೇಮಿಸಿಕೊಳ್ಳುವುದು:
- ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಯನ್ನು ಕಸಾಯಿಖಾನೆಗಳಲ್ಲಿ ನೇಮಕ ಮಾಡದಿರುವುದು:
- ಪ್ರಾಣಿದಯಾ ಸಂಘದವರಿಗೆ ಮತ್ತು ಪ್ರಾಣಿಗಳ ಕ್ಷೇಮಾಭಿವೃದ್ಧಿ ಮಂಡಳಿಯವರಿಗೆ ಕಸಾಯಿಖಾನೆಗಳ ಪರಿವೀಕ್ಷಣೆಗೆ ಅವಕಾಶ ಕಲ್ಪಿಸುವುದು:

**<u>ಕಸಾಯಿಖಾನೆಗಳ ಸೂಕ್ತ ಕಟ್ಟಡದ ವಿನ್ಯಾಸ ಮತ್ತು ನಿರ್ವಹಣೆ:</u>**

- ಕಸಾಯಿಖಾನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ಸಂಸ್ಕರಿಸಲು ಬೇಕಾದ ಸಂಸ್ಕರಣಾ ಘಟಕ ಹಾಗು ನಿಯಂತ್ರಣ ಸಾಧನಗಳನ್ನು ಅಳವಡಿಸಬೇಕು
- ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಆಧುನಿಕ ಕಸಾಯಿಖಾನೆಗಳನ್ನು ನಿರ್ಮಾಣಕ್ಕೆ ಬೇಕಾದ ಜಾಗವನ್ನು ಗುರ್ತಿಸಿ ಆಯ್ಕೆ ಮಾಡುವ ಸಲುವಾಗಿ ನಿಗದಿಪಡಿಸಿರುವ ಮಾರ್ಗಸೂಚಿಗಳನ್ವಯ ಕ್ರಮ ಕೈಗೊಳ್ಳಬೇಕು. ಅಂದರೆ ಆಧುನಿಕ ಕಸಾಯಿಖಾನೆಗಾಗಿನ ಜಾಗವು ನಗರ ಪ್ರದೇಶದ ಹೊರಭಾಗ ಅಥವಾ ನಗರದ ಪರಿಧಿಯಲ್ಲಿರಬೇಕು (periphery) ಹಾಗು ವಿಮಾನ ನಿಲ್ದಾಣದಿಂದ ಸಾಕಷ್ಟು ದೂರವಿರಬೇಕು. ನೀರು, ವಿದ್ಯುತ್ ಹಾಗು ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
- ಕಸಾಯಿಖಾನೆಯು ಸಾಮಾನ್ಯ ತ್ಯಾಜ್ಯ ನಿರ್ವಹಣಾ ಸೌಲಭ್ಯ (common waste facility) ಗಳಾದ STP/ETP/MSW landfill/MSW processing plant ಗಳಿಂದ ಕನಿಷ್ಟ 500 ಮೀ ದೂರದಲ್ಲಿರಬೇಕು, ಕಸಾಯಿಖಾನೆಯು ತ್ಯಾಜ್ಯ ನಿರ್ವಹಣಾ ಸಾಮಾನ್ಯ ಸೌಲಭ್ಯಗಳಿಂದ 1 ಕಿಮೀ ದೂರವಿರುವುದು ಸೂಕ್ತವಿರುತ್ತದೆ.
- ಕಸಾಯಿಖಾನೆಗಳ ಸುತ್ತಲೂ ಕನಿಷ್ಟ 5 ಸಾಲುಗಳಲ್ಲಿ ಗಿಡಗಳನ್ನು ನೆಟ್ಟು, ಹಸಿರು ಪಟ್ಟಿ (green belt) ನ್ನು ಅಭಿವೃದ್ಧಿಪಡಿಸಬೇಕು.
- ಯಾವುದೇ ಕಸಾಯಿಖಾನೆಗಳು ನಗರದ ಒಳಪ್ರದೇಶಗಳಲ್ಲಿ ಇದ್ದಲ್ಲಿ, ಅವುಗಳಿಗೆ ತ್ಯಾಜ್ಯ ಸಂಸ್ಕರಣಾ ಹಾಗು ಮಾಲಿನ್ಯ ನಿಯಂತ್ರಣ ಸಾಧನಗಳನ್ನು ಅಳವಡಿಸಿ, ಮಾಲಿನ್ಯ ನಿಯಂತ್ರಣ ಮಂಡಳಿಯು ಸಮ್ಮತಿಸಿರುವ ಜಾಗಗಳಲ್ಲಿ ಬಿಡುಗಡೆ ಮಾಡಬೇಕು.

ಮೇಲ● ನಿಯಮಗಳ ಜೊತೆಯಲ್ಲಿ Prevention of Cruelty to Animals (Slaughter House) Rules, 2000 (ಪ್ರತಿಯನ್ನು ಲಗ್ಗತ್ತಿಸಲಾಗಿದೆ) ಹಾಗು ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸುವ ತಿದ್ದುಪಡಿ ಅದೇಶ/ಮಾರ್ಪಾಡುಗಳನ್ನು ಅನುಷ್ಠಾನಗೊಳಿಸಲು ಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು.

ಸಹಿ/–
ಆಯುಕ್ತರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಗೆ,

1) ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಕರ್ನಾಟಕರಾಜ್ಯ
2) ಆಯುಕ್ತರು, ಮಹಾನಗರಪಾಲಿಕೆ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ
3) ಆಯುಕ್ತರು, ಮೈಸೂರು, ಮಂಗಳೂರು, ದಾವಣಗೆರೆ, ಬಳ್ಳಾರಿ, ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ ಮತ್ತು ಬೆಳಗಾವಿ ಮಹಾನಗರಪಾಲಿಕೆಗಳು.
4) ಪೌರಾಯುಕ್ತರು, ರಾಜ್ಯದಎಲ್ಲಾ ನಗರಸಭೆಗಳು (ಜಿಲ್ಲಾಧಿಕಾರಿಗಳ ಮೂಲಕ)
5) ಮುಖ್ಯಾಧಿಕಾರಿಗಳು, ರಾಜ್ಯದಎಲ್ಲಾ ಪುರಸಭೆಗಳು, ಪಟ್ಟಣ ಪಂಚಾಯಿತಿಗಳು ಮತ್ತುಅಧಿಸೂಚಿತ ಪ್ರದೇಶ ಸಮಿತಿಗಳು (ಜಿಲ್ಲಾಧಿಕಾರಿಗಳ ಮೂಲಕ)
6) ಶಾಖಾ ರಕ್ಷಣಾಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ;

1. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.

ಆಯುಕ್ತರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು